ಒ.ಎಸ್. ನಂ.96/2021
ಪಿಡಬ್ಲು-1

ದಿನಾಂಕ 19.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು 3ನೆ ತರಗತಿವರೆಗೆ ಪ್ಯಾಸಂಗ ಮಾಡಿರುತ್ತೇನೆ. ನನ್ನ ತಂದೆ ಬಸವರಾಜ ಜೀವಂತವಿರುತ್ತಾರೆ. ನಿಪಿ-1 ರ ದಾಖಲೆ ನೊಂದಣಿಯಾಗಿರುತ್ತದೆ. 1991 ರಲ್ಲಿ ದಾವಾ ಸ್ವತ್ತಿನ ಮುಟೇಷನ ಆಗುವಾಗ ಅಳತೆ ಮಾಡಿಸಿರುತ್ತೀರಾ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಯ MA No.7/2022 ಸಲ್ಲಿಸಿದ್ದು ಅದರಲ್ಲಿ ನಾನು ಹಾಜರಾಗಿರುತ್ತೇನೆ ಎಂದರೆ ಸರಿ. ಸದರಿ ಅಪೀಲಿನಲ್ಲಿ ಏನು ಆದೇಶವಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಅಷ್ಟೊಂದು ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಸದರಿ ಅಪೀಲು ಪುರಸ್ಕೃತಗೊಂಡಿರುತ್ತದೆ ಅದಕ್ಕೆ ನೀವು ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಅಷ್ಟೊಂದು ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ದಿನಾಂಕ 27.04.2018 ರಂದು ತತ್ಕಾಲ ಪೋಡಿ ಅರ್ಜಿ ಯಾರು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂ.149 ರಲ್ಲಿ ಒಟ್ಟು 06-ಎಕರೆ 38-ಗುಂಟೆ ಜಮೀನು ಇದೆ ಎಂದರೆ ಸರಿ. ಸರ್ವೆ ನಂ.149 ರಲ್ಲಿ ಪ್ರತಿವಾದಿಯು 05-ಎಕರೆ 24-ಗುಂಟೆ ಕಬ್ಜೆ ಇರುತ್ತಾರೆ ಎಂದು ಸರ್ವೆ ವರದಿಯಲ್ಲಿ ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ದಾವಾ ಸ್ವತ್ತಿನಲ್ಲಿ 01-ಎಕರೆ 08-ಗುಂಟೆ ಜಮೀನು ಭೂ ಸ್ವಾಧೀನವಾಗಿರುತ್ತದೆ ಎಂದರೆ ಸರಿ. ಆದ್ದರಿಂದ ನೀವು ಕೂಡ 05-ಎಕರೆ 38-ಗುಂಟೆ ಕಬ್ಜೆಯಲ್ಲಿರುತ್ತೇನೆ ನಂದು ಸರ್ವೆ ವರದಿಯಲ್ಲಿ ತೋರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.149 ರಲ್ಲಿ ನೀಲಮ್ಮ ಗಂಡ ಅಡಿವೆಪ್ಪರವರು 02-ಎಕರೆ 27-ಗುಂಟೆ ಕಬ್ಜೆಯಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.149 ರಲ್ಲಿ ಒಟ್ಟು ಎಷ್ಟು ಕ್ಷೇತ್ರ ಜಮೀನು ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ಸರ್ವೆ ನಂ.149 ರಲ್ಲಿ ಒಟ್ಟು 20-ಎಕರೆ 22-ಗುಂಟೆ ಇದೆ ಎಂದರೆ ಸಾಕ್ಷಿ ಮೂವರ ನಡುವೆ ಇರುತ್ತದೆ ಎಂದು ಹೇಳುತ್ತಾರೆ. ಸದರಿ ಸರ್ವೆ ನಂಬರಲ್ಲಿ 05-ಗುಂಟೆ ಪೋಟ ಖರಾಬ ಮತ್ತು 01-ಎಕರೆ 08-ಗುಂಟೆ ಭೂ ಸ್ವಾಧೀನವಾಗಿರುತ್ತದೆ ಎಂದರೆ ಸಾಕ್ಷಿ ಪ್ರತಿವಾದಿಯ ಹೆಸರಿನಲ್ಲಿ ಜಮೀನು ಕಡಿಮೆ ಇರುತ್ತದೆ ಎಂದು ಹೇಳುತ್ತಾರೆ ಮತ್ತು ಆತನಿಗೆ ಬೇರೆ ಕಡೆ 2-ಎಕರೆ ಜಮೀನು ಬಂದಿರುತ್ತದೆ ಎಂದು ಹೇಳುತ್ತಾರೆ. ಸದರಿ 02-ಎಕರೆ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿಲ್ಲ. 01-ಎಕರೆ 08-ಗುಂಟೆ ಭೂ ಸ್ವಾಧೀನವಾದ ನಂತರ ಎಲ್ಲರಿಗೂ

ಹಿಸ್ಸೆಗಳಾದವು ಎಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿಯ ನಡುವೆ ಕೆನಾಲ ಹಾದು ಹೋಗಿರುತ್ತದೆ ಎಂದರೆ ಸಾಕ್ಷಿ ಒಂದು ದಂಡೆಯಲ್ಲಿ ಹಾದು ಹೋಗಿದ್ದು ನಂತರ ಪ್ರತಿವಾದಿಯ ಜಮೀನಿನಲ್ಲಿ ಹೋಗಿರುತ್ತದೆ ಎಂದು ಹೇಳುತ್ತಾರೆ. ದಿನಾಂಕ 27.11.2018 ರಂದು ದಾವಾ ಸ್ವತ್ತು ಹಿಸ್ಸಾ ಪೋಡಿಯಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಹಾಜರುಪಡಿಸಿದ ನಕ್ಷೆಯಲ್ಲಿ ಪ್ರತಿವಾದಿಯ ಜಮೀನನಲ್ಲಿ ಕೆನಾಲ ಹಾದು ಹೋಗಿರುತ್ತದೆ ಎಂದರೆ ಸರಿ. ಪ್ರತಿವಾದಿಯ ಕೆನಾಲನ ಒಂದು ಭಾಗದಲ್ಲಿ ಸಾಗುವಳಿ ಮಾಡುತ್ತಿದ್ದು ಕೆನಾಲದ ಮತ್ತೊಂದು ಭಾಗದಲ್ಲಿ ನಾನು ಸಾಗುವಳಿ ಮಾಡುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಚಕಬಂದಿ ನನಗೆ ಗೊತ್ತಾಗುವುದಿಲ್ಲ. ನನ್ನ ಹಾಗೂ ಪ್ರತಿವಾದಿಯ ಜಮೀನಿನ ನಡುವೆ ಕೆನಾಲ ಇದೆ ಮತ್ತು ಅದೆ ಬಾಂದಾರಿ ಇದೆ ಎಂದರೆ ಸಾಕ್ಷಿ ನನಗೆ ಅರ್ಥವಾಗುವುದಿಲ್ಲ ಎಂದು ಹೇಳುತ್ತಾರೆ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ